**ಸಾಕ್ಷಿಯನ್ನು ದಿನಾಂಕ 18.03.2021 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: ಆರೋಪಿಗಳ** ಪರ ಶ್ರೀ ಟಿ ಪಿ ಡಿ ವಕೀಲರವರಿಂದಃ

1. ನನಗೆ ಪ್ರಾಸಾ-14 ಮತ್ತು 15 ಗೊತ್ತಿಲ್ಲ. ಪ್ರಾಸಾ-14 ಮತ್ತು 15 ಅವರನ್ನು ನಾನು ನೋಡಿಲ್ಲ. ನಾನು ಕಳೆದ 8-9 ವರ್ಷಗಳಿಂದ ಮೊಬೈಲ್ ನ್ನು ಇಟ್ಟುಕೊಂಡಿದ್ದೇನೆ. ಏರಟೆಲ್ ಸಿಮ್ ಇದೆ. ನನ್ನ ಮೊಬೈಲ್ ಗೆ 2 ಸಿಮ್ ಗಳ ಸೌಲಭ್ಯ ಇದೆ. ನಾನು ಏರಟೆಲ್ ಕಂಪನಿಯ ಒಂದೇ ಸಿಮ್ ನ್ನು ಮಾತ್ರ ಅಳವಡಿಸಿದ್ದೇನೆ. ಪ್ರಾಸಾ-1 ನನ್ನ ದೂರದ ಸಂಬಂಧಿ. ಶ್ರೀ ಕೃಷ್ಣ ಅವರ ಮೇಲೆ ಹಲ್ಲೆ ಆದಾಗ ಪ್ರಾಸಾ-1 ಸ್ಥಳಕ್ಕೆ ಬಂದಿದ್ದರು. ದಾರಿಯಲ್ಲಿ ಹೋಗುತ್ತಿದ್ದ ಪ್ರಾಸಾ-1 ಅವರನ್ನು ನಾನು ಕರೆದಿದ್ದೇನೆ. ಪ್ರಾಸಾ-1 ಅವರು ವಿಧ್ಯುತ್ ಗುತ್ತಿಗೆದಾರರು ಎಂದು ಗೊತ್ತಿಲ್ಲ. ಪ್ರಾಸಾ-1 ಅವರ ಕೆಲಸದ ಬಗ್ಗೆ ಗೊತ್ತಿಲ್ಲ. ನಾನು ಕಳೆದ 8 ವರ್ಷಗಳಿಂದ ವಿಧ್ಯುತ್ ಕೆಲಸ ಮಾಡುತ್ತಿದ್ದೇನೆ. ನಾನು ಶ್ರೀ ಕೃಷ್ಣ ಅವರ ಜೊತೆ ಮತ್ತು ಬೇರೆಯವರ ಹತ್ತಿರ ಸಹ ವಿಧ್ಯುತ್ ಕೆಲಸ ಮಾಡುತ್ತಿದ್ದೆ.

2. ಶ್ರೀ ಕೃಷ್ಣ ಅವರು ನನಗೆ ಹೇಳಿದಂತೆ ಗೋಕುಲಂ ನ ಶ್ರೀ ಪ್ರಕಾಶ ಅವರ ಮನೆಯಲ್ಲಿ ವಿಧ್ಯುತ್ ಕೆಲಸ ಮಾಡಿದ್ದೇನೆ. ದಿನಾಂಕ 23.12.2016 ರಂದು ಮೊದಲನೇ ದಿನ ಶ್ರೀ ಪ್ರಕಾಶ ಅವರ ಮನೆಯಲ್ಲಿ ವಿಧ್ಯುತ್ ಕೆಲಸಕ್ಕೆ ಹೋಗಿದ್ದೇನೆ. ದಿನಾಂಕ 23.12.2016 ರ ಮೊದಲು ಶ್ರೀ ಪ್ರಕಾಶ ಅವರ ಮನೆಯಲ್ಲಿ ವಿಧ್ಯುತ್ ಕೆಲಸ ಮಾಡುವ ಬಗ್ಗೆ ನಾನು ಮತ್ತು ಶ್ರೀ ಕೃಷ್ಣ ನೋಡಿಕೊಂಡು ಬಂದಿದ್ದೇವೆ ದಿನಾಂಕ ನೆನಪಿಲ್ಲ. ಶ್ರೀ ಪ್ರಕಾಶ ಅವರ ಮನೆಯಲ್ಲಿ ವಿಧ್ಯುತ್ ರಿಪೇರಿ ಕೆಲಸ ಇತ್ತು. ದಿನಾಂಕ 23.12.2016 ರ ಮೊದಲು ಶ್ರೀ ಪ್ರಕಾಶ ಅವರ ಮನೆಯಲ್ಲಿ ವಿಧ್ಯುತ್ ಕೆಲಸ ಮಾಡುವ ಬಗ್ಗೆ ನೋಡಲು ಹೋದಾಗ ಕೆಲಸಕ್ಕೆ ಅವಶ್ಯಕ ಇದ್ದ ಕಿಟ್ ನ್ನು ಅವರ ಮನೆಯಲ್ಲಿ ಇಟ್ಟು ಬಂದಿದ್ದೇವೆ ಎಂದರೆ ಸರಿಯಲ್ಲ. ಶ್ರೀ ಕೃಷ್ಣ ಅವರು ನನ್ನನ್ನು ಮಾತ್ರ ಕೆಲಸಕ್ಕೆ ನೇಮಿಸಿದ್ದರು ನನ್ನ ಮತ್ತು ಶ್ರೀ ಕೃಷ್ಣ ಅವರ ಮನೆ ಪಡುವಾರಹಳ್ಳಿಯಲ್ಲಿ ಬೇರೆ ಬೇರೆ ಕಡೆ ಇದೆ. ವಿಧ್ಯುತ್ ಕೆಲಸಕ್ಕೆ ಅವಶ್ಯಕ ಇದ್ದ ಕಿಟ್ ಶ್ರೀ ಕೃಷ್ಣ ಅವರ ಬಳಿ ಮಾತ್ರ ಇತ್ತು ಮತ್ತು ನನ್ನ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ದಿನಕ್ಕೆ 500/- ರೂ ಕೂಲಿ ಇತ್ತು. ಶ್ರೀ ಪ್ರಕಾಶ ಅವರಿಂದ ನಾನು ಮುಂಗಡವಾಗಿ ಹಣ ಪಡೆದಿರಲಿಲ್ಲ.

3. ನಾನು ಶ್ರೀ ಪ್ರಕಾಶ ಅವರ ಮನೆಯಿಂದ ವಿಧ್ಯುತ್ ಕೆಲಸಕ್ಕೆ ಬೇಕಾದ ಸಾಮಾನು ತರುವ ಸಲುವಾಗಿ ಬೆ.10-10.30 ರ ವೇಳೆಗೆ ಅಂಗಡಿಯ ಕಡೆಗೆ ಬಂದಿದ್ದೆ. ನಾನು ಪಡುವಾರಹಳ್ಳಿ ಯಿಂದ ಸೆಂಟ್ ಜೋಸೆಫ ತಾಲೆಯ ಪಕ್ಕದ ರಸ್ತೆಯಿಂದ ಮಾತ್ರ ಮಂಡಲಿ ಸರ್ಕಲ್ ಗೆ ಹೋಗಿದ್ದೇನೆ. ವಿಧ್ಯುತ್ ಕೆಲಸಕ್ಕೆ ಬೇಕಾದ ಸಾಮಾನು ತರುವ ಬಗ್ಗೆ ನಾನು ಶ್ರೀ ಕೃಷ್ಣ ಅವರಿಗೆ ತಿಳಿಸಿರಲಿಲ್ಲ. ಟೆಂಪಲ್ ರಸ್ತೆಯಲ್ಲಿ ಏಕಮುಖ ಸಂಚಾರ ಇದೆ ಎಂದರೆ ಸರಿ. ಘಟನೆ ಸ್ಥಳಕ್ಕೆ ಟೆಂಪಲ್ ರಸ್ತೆ ಕಡೆಯಿಂದ ಮತ್ತು ಪೋಸ್ಟ್ ಆಫೀಸ್ ಕಡೆಯಿಂದ ಹೋಗಬಹುದು. ನನಗೆ ಮತ್ತು 1 ರಿಂದ 5 ನೇ ಆರೋಪಿಗಳ ನಡುವೆ ಮಾತುಕತೆ ಇಲ್ಲ. 1 ರಿಂದ 5 ನೇ ಆರೋಪಿಗಳು ದೇವು ಕಡೆಯವರು ಎಂದು ಗೊತ್ತಿಲ್ಲ. ನಾನು ಹವಾ ಮಾದೇಶನ

ಕಡೆಯುವನು ಎಂದರೆ ಸರಿಯಲ್ಲ. ನಾನು 8-9 ವರ್ಷಗಳಿಂದ ಟೆಂಪಲ್ ಹತ್ತಿರ ಹೋದಾಗಿನಿಂದ 1 ರಿಂದ 5 ನೇ ಆರೋಪಿಗಳನ್ನು ನೋಡಿದ್ದೇನೆ ಮತ್ತು ಹೆಸರು ತಿಳಿದಿದ್ದೇನೆ.

4. ಗೋಕುಲಂನಲ್ಲಿ ವಿದ್ಯುತ್ ಕೆಲಸಕ್ಕೆ ಬೇಕಾದ ವಸ್ತುಗಳು ಸಿಗುತ್ತದೆ ಎಂದರೆ ಸರಿಯಲ್ಲ. ಹೈವೆ ಇಟಿಂಗ್ ಹೋಟೆಲ್ ಕಾರ್ನರ್ ಬಿಲ್ಡಿಂಗ್ ನಲ್ಲಿ ಇದೆ ಎಂದರೆ ಸರಿ. ಹೈವೆ ಇಟಿಂಗ್ ಹೋಟೆಲ್ ಎದುರಿಗೆ ಗ್ಯಾರೇಜ್ ಇಲ್ಲ. ಶ್ರೀ ಕೃಷ್ಣ ಅವರ ಕೆಲಸಗಾರರು ಹೈವೆ ಇಟಿಂಗ್ ಹೋಟೆಲ್ ನಲ್ಲಿ ಟಿ ಕುಡಿದು ಕೆಲಸಕ್ಕೆ ಹೋಗುತ್ತಿದರು ಎಂದು ಗೊತ್ತಿಲ್ಲ. ಪ್ರಕರಣ ದಾಖಲು ಆದ ನಂತರ ಶ್ರೀ ಕೃಷ್ಣ ಅವರ ಕೆಲಸಗಾರರು ಹೈವೆ ಇಟಿಂಗ್ ಹೋಟೆಲ್ ನಲ್ಲಿ ಟಿ ಕುಡಿಯಲು ಸೇರುತ್ತಿದ್ದ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಪಡುವಾರಹಳ್ಳಿಯಿಂದ ಟೆಂಪಲ್ ರಸ್ತೆ ಕಡೆಗೆ ಬಂದು ಪೋಸ್ಟ್ ಆಫೀಸ್ ರಸ್ತೆಗೆ ಹೋಗಿ ಮುಂದೆ ಎಡಕ್ಕೆ ತೆಗೆದುಕೊಂಡಿದ್ದೇನೆ. ಹೈವೆ ಇಟಿಂಗ್ ಹೋಟೆಲ್ ನಿಂದ ಕೆಳಗೆ ಬಂದರೆ ರಾಯಲ್ ವರ್ಲ್ಡ್ ಇದೆ ಎಂದರೆ ಸರಿ. ಹೈವೆ ಇಟಿಂಗ್ ಹೋಟೆಲ್ ನಿಂದ ರಾಯಲ್ ವರ್ಲ್ಡ್ ಗೆ ಸುಮಾರು 300-350 ಅಡಿ ದೂರ ಇದೆ. ಟೆಂಪಲ್ ರಸ್ತೆಯಿಂದ ಹೈವೆ ಇಟಿಂಗ್ ಹೋಟೆಲ್ ಗೆ ಬರಬಹುದು ಮತ್ತು ಹತ್ತಿರದಲ್ಲಿ ಮನೆಗಳು ಇದೆ ಎಂದರೆ ಸರಿ.

5. ನಾನು ಶ್ರೀ ಪ್ರಕಾಶ ಅವರಿಗೆ ವಿದ್ಯುತ್ ಕೆಲಸಕ್ಕೆ ಬೇಕಾದ ವಸ್ತುಗಳನ್ನು ತರುವ ಬಗ್ಗೆ ಹೇಳಿ ಬಂದಿದ್ದೇನೆ. ಶ್ರೀ ಕೃಷ್ಣ ಬಿದ್ದಿದ್ದ ಸ್ಥಳಕ್ಕೆ ಹತ್ತಿರದಲ್ಲಿ 3 ರಸ್ತೆಗಳು ಸೇರುತ್ತದೆ ಎಂದರೆ ಸರಿ. ಮುಖ್ಯ ರಸ್ತೆಯಲ್ಲಿ ಸಾಕಷ್ಟು ವಾಹನ ಸಂಚಾರ ಇತ್ತು ಎಂದರೆ ಸರಿಯಲ್ಲ. ಟೆಂಪಲ್ ರಸ್ತೆ ಏಕಮುಖ ಸಂಚಾರ ಇದ್ದ ಕಾರಣ ಹೈವೆ ಇಟಿಂಗ್ ಹೋಟೆಲ್ ನ ಮುಖ್ಯ ರಸ್ತೆಯಲ್ಲಿ ಸಾಕಷ್ಟು ಜನ ಮತ್ತು ವಾಹನ ಸಂಚಾರ ಇತ್ತು ಎಂದರೆ ಸರಿಯಲ್ಲ. ಶ್ರೀ ಕೃಷ್ಣ ಬಿದ್ದಿದ್ದ ಸ್ಥಳದಿಂದ ಟೆಂಪಲ್ ರಸ್ತೆ ಕಾಣುತ್ತದೆ ಎಂದರೆ ಸರಿ. ಶ್ರೀ ಕೃಷ್ಣ ಅವರು ಕೆಲಸಕ್ಕೆ ಬರುವ ಬಗ್ಗೆ ಹೇಳಿರಲಿಲ್ಲ. ನನ್ನ ಮುಂದೆ ಸ್ಕೂಟರ್ ನಲ್ಲಿ ಶ್ರೀ ಕೃಷ್ಣ ಅವರು ಹೋಗುತ್ತಿದ್ದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಶ್ರೀ ಕೃಷ್ಣ ಅವರನ್ನು ದೂರದಿಂದ ಗುರುತುಹಿಡಿಯಲು ಆಗುತ್ತಿರಲಿಲ್ಲ. ಶ್ರೀ ಕೃಷ್ಣ ಅವರು ನನ್ನ ಮುಂದೆ 100 ಮೀ ದೂರದಲ್ಲಿ ಸ್ಕೂಟರ್ ನಲ್ಲಿ ಹೋಗುತ್ತಿದ್ದರು. ಅದೇ ವೇಳೆ ಅದೇ ರಸ್ತೆಯಲ್ಲಿ ಬೇರೆ ವಾಹನಗಳು ಓಡಾಡುತ್ತಿದ್ದವು ಎಂದರೆ ಸರಿ. ನಾನು ಮತ್ತು ಶ್ರೀ ಕೃಷ್ಣ ಅವರು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದೆವು. ಶ್ರೀ ಕೃಷ್ಣ ಅವರು ಸದರಿ ರಸ್ತೆಯಲ್ಲಿ ಹೋಗುತ್ತಿದ್ದ ಕಾರಣ ಗೊತ್ತಿಲ್ಲ. ಕಾರಿನ ಮುಂಬಾಗ ಸ್ಕೂಟರ್ ನ ಬಲಬಾಗಕ್ಕೆ ಡಿಕ್ಕಿಪಡಿಸಿದೆ. ಶ್ರೀ ಕೃಷ್ಣ ಅವರು ಸ್ಕೂಟರ್ ನಿಂದ ಬಿದ್ದಿದ್ದನ್ನು ನೋಡಿದ್ದೇನೆ. ಕಾರಿನ ಬ್ರೇಕ್ ಮಾರ್ಕ್ ನೋಡಿಲ್ಲ.

6. ನಾನು ನಿಧಾನವಾಗಿ ಶ್ರೀ ಕೃಷ್ಣ ಅವರು ಬಿದ್ದಿದ್ದ ಸ್ಥಳಕ್ಕೆ ಬಂದಿದ್ದೇನೆ. ಶ್ರೀ ಕೃಷ್ಣ ಅವರು ಎಡಬಾಗಕ್ಕೆ ಬಿದ್ದಿದ್ದರು. ನಾನು ಪೋಲಿಸರ ಸಮಕ್ಷಮ 5 ಜನ ವ್ಯಕ್ತಿಗಳು ಹಲ್ಲೆ ಮಾಡಿದ ಬಗ್ಗೆ ಹೇಳಿದ್ದೇನೆ. ಸ್ಥಳದಲ್ಲಿ ಹಲ್ಲೆ ಮಾಡಿದ ವ್ಯಕ್ತಿಗಳ ಬಗ್ಗೆ ನನಗೆ ನಂತರದಲ್ಲಿ ತಿಳಿದಿದೆ ಎಂದರೆ ಸರಿ. ಕಾರಿನಲ್ಲಿ ಇದ್ದ ವ್ಯಕ್ತಿಗಳು ಹಲ್ಲೆ ಮಾಡಿದ ಬಗ್ಗೆ ಹೇಳಿಕೆ ನಿಡಿದ್ದೇನೆ. ದಿನಾಂಕ 25.12.2016 ರಂದು ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿದ್ದಾರೆ. ನಾನು ಹೇಳಿಕೆಯನ್ನು ಓದಿದ್ದೇನೆ. ನಾನು ಶ್ರೀ ಕೃಷ್ಣ ಅವರಿಗೆ ಮಾತನಾಡಲು ಪ್ರಯತ್ನ

ಪಟ್ಟಿದ್ದು ಅವರು ಮಾತನಾಡಲಿಲ್ಲ. ಶ್ರೀ ಕೃಷ್ಣ ಅವರ ತಲೆಗೆ ಮತ್ತು 2 ಕೈಗಳಿಗೆ ಏಟು ಬಿದ್ದಿತ್ತು. ಸ್ಥಳದಲ್ಲಿ ನನ್ನ ಹೊರತಾಗಿ 2-3 ಜನ ಇದ್ದರು ಅವರ ಬಗ್ಗೆ ಗೊತ್ತಿಲ್ಲ. ನಂತರದಲ್ಲಿ ಸದರಿ 2-3 ಜನ ವ್ಯಕ್ತಿಗಳನ್ನು ನಾನು ನೋಡಿಲ್ಲ. ಸ್ಥಳದಲ್ಲಿ ಚಾಕು ಬಿದ್ದಿರಲಿಲ್ಲ. ಶ್ರೀ ಕೃಷ್ಣ ಬಿದ್ದಿದ್ದ ಮನೆಯ ಕಾಂಪೌಡ್ ಗೇಟನಿಂದ ಮನೆಯ ಮುಖ್ಯ ಬಾಗಿಲಿಗೆ ಸುಮಾರು 20 ಅಡಿ ಅಂತರ ಇದೆ ಎಂದರೆ ಸರಿ. ಸದರಿ ಮನೆಯ ವ್ಯಕ್ತಿಗಳು ಹೊರಗೆ ಬಂದಿದ್ದರು. ಅಕ್ಕ-ಪಕ್ಕದ ಅಂಗಡಿ ವ್ಯಕ್ತಿಗಳು ಹೊರಗೆ ಬಂದಿದ್ದ ಬಗ್ಗೆ ನಾನು ಗಮನಿಸಿಲ್ಲ. ನಾನು ಮತ್ತು ಸದರಿ ಮನೆಯ ವ್ಯಕ್ತಿಗಳ ಹೊರತಾಗಿ ಬೇರೆ ವ್ಯಕ್ತಿಗಳು ಶ್ರೀ ಕೃಷ್ಣ ಬಿದ್ದಿದ್ದ ಸ್ಥಳಕ್ಕೆ ಹತ್ತಿರದಲ್ಲಿ ಇರಲಿಲ್ಲ. 5 ನಿಮಿಷ ಅವಧಿಯಲ್ಲಿ ಶ್ರೀ ಕೃಷ್ಣ ಬಿದ್ದಿದ್ದ ಸ್ಥಳಕ್ಕೆ ಫ್ರಾಸಾ-1 ಬಂದಿದ್ದಾರೆ. ಶ್ರೀ ಕೃಷ್ಣ ಅವರ ಮನೆಯ ವ್ಯಕ್ತಿಗಳ ಫೋನ್ ಸಂಖ್ಯೆ ನನ್ನ ಬಳಿ ಇರಲಿಲ್ಲ.

7. ಫ್ರಾಸಾ-1 ಅವರು ಶ್ರೀ ಕೃಷ್ಣ ಅವರನ್ನು ಅಪೋಲೊ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಬಗ್ಗೆ ಹೇಳಿದ್ದರು. ವ್ಯಾನಿನಲ್ಲಿ ವ್ಯಾನಿನ ಚಾಲಕ, ಶ್ರೀ ಕೃಷ್ಣ, ಫ್ರಾಸಾ-1 ಮತ್ತು ನಾನು ಮಾತ್ರ ಇದ್ದೆವು. ನಾನು ಆಸ್ಪತ್ರೆಗೆ ಹೋಗುವಾಗ ಶ್ರೀ ಕೃಷ್ಣ ಅವರ ಕಡೆಯವರು ಆಸ್ಪತ್ರೆಯ ಹತ್ತಿರ ಸೇರಿದ್ದರು ಎಂದರೆ ಸರಿಯಲ್ಲ. ಆಸ್ಪತ್ರೆಯ ಹತ್ತಿರ ಪೋಲಿಸರು ಬಂದಿರಲಿಲ್ಲ. 5-10 ನಿಮಿಷ ಅವಧಿಯಲ್ಲಿ ಶ್ರೀ ಕೃಷ್ಣ ಅವರು ಮೃತಪಟ್ಟಿದ್ದು ನಂತರ ನಾನು ಮನೆಗೆ ಹೋಗಿದ್ದೇನೆ. ಫ್ರಾಸಾ-1 ನನ್ನ ದೂರದ ಸಂಬಂಧಿ. ಫ್ರಾಸಾ-1 ಅವರು ದೂರು ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ವ್ಯಾನಿನಲ್ಲಿ ಹೋಗುವಾಗ ಘಟನೆ ಬಗ್ಗೆ ನಾನು ಫ್ರಾಸಾ-1 ಅವರಿಗೆ ತಿಳಿಸಿಲ್ಲ. ಘಟನೆ ಬಗ್ಗೆ ಆಸ್ಪತ್ರೆಯ ವೈದ್ಯರು ನನ್ನ ಬಳಿ ಕೇಳಿಲ್ಲ ಮತ್ತು ನಾನು ಹೇಳಿಲ್ಲ. ಶ್ರೀ ಕೃಷ್ಣ ಅವರ ಸಂಬಂಧಿಕರು ಆಸ್ಪತ್ರೆಯ ಬಳಿ ಬಂದಿದ್ದರು ಎಂದರೆ ಸಾಕ್ಷಿದಾರರು ತಾನು ಆಸ್ಪತ್ರೆಯಿಂದ ಹೊರಟು ಹೋಗಿದ್ದ ಬಗ್ಗೆ ನುಡಿಯುತ್ತಾರೆ. 5 ಜನ ಆರೋಪಿಗಳು ಮಚ್ಚಿನಿಂದ ಹಲ್ಲೆ ಮಾಡಿದ್ದಾರೆ ಯಾರು ಯಾರು ಯಾವ ಯಾವ ಆಯುಧದಿಂದ ಹಲ್ಲೆ ಮಾಡಿದ್ದಾರೆ ಎಂದು ಹೇಳಲು ಬರುವುದಿಲ್ಲ. 5 ಜನ ಆರೋಪಿಗಳ ಕೈಯಲ್ಲಿ ಮಚ್ಚಿನ ತರ ಆಯುಧ ಇತ್ತು. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಮತ್ತು ಈಗ ಪ್ರಥಮವಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ.

8. ಘಟನೆ ನಂತರ ನಾನು ಸ್ಥಳಕ್ಕೆ ಪುನಃ ಹೋಗಿಲ್ಲ. ದಿನಾಂಕ 25.12.2016 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ನಾನು ಠಾಣೆಗೆ ಹೋದಾಗ ಫ್ರಾಸಾ-1 ಇದ್ದರು ಎಂದರೆ ಸರಿಯಲ್ಲ. ಫ್ರಾಸಾ-1 ಅವರು ನೀಡಿದ ದೂರನ್ನು ನನಗೆ ತೋರಿಸಿದ್ದಾರೆ ಎಂದರೆ ಸರಿಯಲ್ಲ. ಶ್ರೀ ಕೃಷ್ಣ ಅವರ ಶವ ಸಂಸ್ಕಾರಕ್ಕೆ ನಾನು ಹೋಗಿಲ್ಲ. ಘಟನೆ ಬಗ್ಗೆ ನಾನು ನಮ್ಮ ಮನೆಯಲ್ಲಿ ಯಾರಿಗೂ ತಿಳಿಸಿಲ್ಲ. ಶ್ರೀ ಕೃಷ್ಣ ಅವರಿಗೆ ಆದ ಹಲ್ಲೆಗಳ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. 5 ಜನ ಆರೋಪಿಗಳು 2 ನಿಮಿಷ ತನಕ ಹಲ್ಲೆ ಮಾಡಿದ್ದಾರೆ. ಏಟು ಬಿದ್ದ ವ್ಯಕ್ತಿಯ ಹತ್ತಿರ ನಾನು ಹೋಗಿ ನೋಡಿದಾಗ ನನ್ನ ಚಿಕ್ಕಪ್ಪ ಶ್ರೀ ಕೃಷ್ಣ ಎಂದು ತಿಳಿಯಿತು ಎಂದರೆ ಸರಿ. ಆಸ್ಪತ್ರೆಯಿಂದ ನಾನು ಬಂದ ನಂತರ ಫ್ರಾಸಾ-1 ಅವರನ್ನು ಭೇಟಿ ಮಾಡಿಲ್ಲ. ನಾನು ಮನೆಯಲ್ಲಿ ಇದ್ದಾಗ ದೇವು ಕಡೆಯವರು ಹಲ್ಲೆ ಮಾಡಿದ ಬಗ್ಗೆ ಸುದ್ದಿಗಳು ಹರಡಿತ್ತು ಎಂದು ಗೊತ್ತಿಲ್ಲ. ಶ್ರೀ ಕೃಷ್ಣ ಬಿದ್ದಿದ್ದ ಮನೆಯ ವ್ಯಕ್ತಿಗಳು ನೀರು ತರುವ ವೇಳೆಗೆ ನಾನು ಶ್ರೀ ಕೃಷ್ಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇನೆ. ಶ್ರೀ ಕೃಷ್ಣ ಅವರು

ಹವಾ ಮಾದೇಶ ಗುಂಪಿನ ಕಡೆ ಗುರುತಿಸಿಕೊಂಡಿದ್ದರು ಎಂದು ಗೊತ್ತಿಲ್ಲ.

9. ದಿನಾಂಕ 17.01.2017 ರಂದು ನ್ಯಾಯಾಲಯಕ್ಕೆ ಹಾಜರು ಆಗುವ ಬಗ್ಗೆ ಸಮನ್ಸ್ ನೀಡಿದ್ದರು. ದಿನಾಂಕ 25.12.2016 ರ ನಂತರ ನಾನು ಪೊ.ಠಾಣೆಗೆ ಹೋಗಿಲ್ಲ. ನನ್ನ ಹೇಳಿಕೆಯಂತೆ ಸಾಕ್ಷಿ ಹೇಳಲು ಪೋಲಿಸರು ನನಗೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ. ನಾನು ನೀಡಿದ ಹೇಳಿಕೆಯಂತೆ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ. ನಾನು ಘಟನೆಯನ್ನು ನೋಡಿದ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ಶ್ರೀ ಕೃಷ್ಣ ಬಿದ್ದಿದ್ದ ಮೋರಿ ಒಳಗೆ ಬಿದ್ದಿದ್ದರು. ಸ್ಥಳದಲ್ಲಿ ಸ್ವಲ್ಪ ರಕ್ತ ಬಿದ್ದಿತ್ತು. ಶ್ರೀ ಕೃಷ್ಣ ಅವರಿಗೆ ಸಾಕಷ್ಟು ವೈರಿಗಳು ಇದ್ದರು ಎಂದು ಗೊತ್ತಿಲ್ಲ. ನಾನು ಸ್ಥಳದಲ್ಲಿ ಬಿದ್ದಿದ್ದ ಆಯುಧಗಳ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ನಾನು ಘಟನೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ದೇವು ಕಡೆಯವರು ಎಂದು ತಿಳಿದ ನಂತರ ಮತ್ತು ದೂರು ದಾಖಲು ಆದ ನಂತರ ನನ್ನನ್ನು ಸಾಕ್ಷಿಯಾಗಿ ಸೃಷ್ಟಿಸಿದ್ದಾರೆ ಮತ್ತು ನಾನು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಘಟನೆ ಸ್ಥಳಕ್ಕೆ ಹತ್ತಿರದಲ್ಲಿ ಸುಮಾರು ಕಡೆ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿದ್ದಾರೆ ಎಂದು ನೋಡಿಲ್ಲ. ನನ್ನ ತಂದೆ ಸಾಕ್ಷಿ ಇದ್ದಾರೆ ಎಂದರೆ ಸರಿ.

**8, 10, 11, 12 ನೇ ಆರೋಪಿಗಳ ಪರ ವಕೀಲರು ಈ ಮೇಲಿನಂತೆ ಪಾಟೀಸವಾಲನ್ನು ಅಳವಡಿಸಿಕೊಂಡಿದ್ದಾರೆ.**

**ಮರುವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ .,**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,**
**ಮೈಸೂರು.**